# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್/ಉಪಲೋಕ್/ಬಿಡಿ/732/2022
ಪಿ.ಓ. ಎ.ಆರ್.ಇ-06 (ಮಂಡನಾಧಿಕಾರಿಗಳ ಶಾಖೆ).

ಬಹುಮಹಡಿಗಳ ಕಟ್ಟಡ,
ಡಾ॥ ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು ದಿನಾಂಕ: 08/11/2022.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3) ರ ಅನ್ವಯ ಶಿಫಾರಸ್ಸು ವರದಿ

**ವಿಷಯ:** ಶ್ರೀ. ಹೆಚ್. ಶಿವಪ್ಪ ಬಿನ್ ಹನುಮಂತಪ್ಪ. ಗ್ರೇಡ್-1 ಕಾರ್ಯದರ್ಶಿ (ಪ್ರಭಾರ) ಪಿ.ಡಿ.ಓ., ಹೊಸೂರು ಗ್ರಾಮ ಪಂಚಾಯಿತಿ, ಶಿಕಾರಿಪುರ ತಾಲ್ಲೂಕು, ಶಿವಮೊಗ್ಗ ಜಿಲ್ಲೆರವರು ಸರ್ಕಾರಿ ಕರ್ತವ್ಯ ನಿರ್ವಹಿಸುವ ಕಾಲಕ್ಕೆ ದುರ್ನಡತೆ / ದುರ್ವರ್ತನೆ ತೋರಿದ ಕುರಿತಂತೆ ನಿಮ್ಮ ಮೇಲೆ ಕ್ರಮ ಜರುಗಿಸುವ ಬಗ್ಗೆ.

****

1. ಶಿವಮೊಗ್ಗ ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕರು (ಇನ್ನು ಮುಂದೆ 'ತನಿಖಾಧಿಕಾರಿ' ಎಂದು ಕರೆಯಲ್ಪಡುತ್ತಾರೆ) ಇವರು ಸಲ್ಲಿಸಿದ ತನಿಖಾ ವರದಿ ಮತ್ತು ದಾಖಲೆಗಳನ್ನು ಪರಿಶೀಲಿಸಲಾಗಿ **ಶ್ರೀ. ಹೆಚ್. ಶಿವಪ್ಪ ಬಿನ್ ಹನುಮಂತಪ್ಪ. ಗ್ರೇಡ್-1 ಕಾರ್ಯದರ್ಶಿ (ಪ್ರಭಾರ) ಪಿ.ಡಿ.ಓ., ಹೊಸೂರು ಗ್ರಾಮ ಪಂಚಾಯಿತಿ, ಶಿಕಾರಿಪುರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ** (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ಇವರನ್ನು **ಶ್ರೀ. ಬಿ. ಮಂಜುನಾಥ್ ಬಿನ್ ಬೂದ್ಯಪ್ಪ, ವ್ಯವಸಾಯ, ವಾಸ: ಎಂ.ಎಸ್. ಕೇರಿ, ಶಿಕಾರಿಪುರ, ಶಿವಮೊಗ್ಗ ಜಿಲ್ಲೆ** (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಅವರ ಸಂಬಂಧಿಯಾದ ಹಾಲೇಶಪ್ಪರವರು ಕೈಗೊಂಡ ಕಾಮಗಾರಿಯ ಉಳಿದ ಹಣದ ಬಗ್ಗೆ ಮಂಜೂರು ಮಾಡಲು ಕೋರಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು ದುರ್ನಡತೆ ತೋರಿಸಿರುತ್ತಾರೆಂದು ವರದಿ ಸಲ್ಲಿಸಿದ ಮೇರೆಗೆ ದಾಖಲಾತಿಗಳನ್ನು ಪರಿಶೀಲಿಸಿದಾಗ ಎದುರುದಾರರು ಅವರ ಸೇವಾ ಅವಧಿಯಲ್ಲಿ ದುರ್ನಡತೆ ತೋರಿಸಿರುವುದು ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 7(2)ರಡಿಯಲ್ಲಿ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿರುತ್ತದೆ.

ಸಂ.ಕಂಪ್ಲೇಂಟ್/ಉಪಲೋಕ್/ಬಿಡಿ/732/2022
ಪಿ.ಓ. ಎ.ಆರ್.ಇ–06

2. **ಪ್ರಕರಣದ ಸಂಕ್ಷಿಪ್ತ ಸಾರಾಂಶ :-**

i) ದೂರುದಾರರಾದ **ಶ್ರೀ. ಬಿ. ಮಂಜುನಾಥ್ ಬಿನ್ ಬೂದ್ಯಪ್ಪ** ರವರ ಅತ್ತೆಯ ತಮ್ಮನಾದ ಶ್ರೀ. ಹಾಲೇಶಪ್ಪ ಬಿನ್ ಹನುಮಂತಪ್ಪ, ಬೇಗೂರು ಗ್ರಾಮ, ಶಿಕಾರಿಪುರ ತಾಲ್ಲೂಕು ಇವರು ಮೂರನೇ ದರ್ಜೆ ಗುತ್ತಿಗೆದಾರರಾಗಿದ್ದು, ಅವರಿಗೆ ಹೆಚ್ಚಿನ ಕೆಲಸಗಳಿರುವುದರಿಂದ ಅವರ ಕೆಲವು ಕಾಮಗಾರಿಗಳನ್ನು ದೂರುದಾರರೇ ನೋಡಿಕೊಳ್ಳುತ್ತಿರುತ್ತಾರೆ. ಅದರಂತೆ, ಶಿಕಾರಿಪುರ ತಾಲ್ಲೂಕಿನ ಹೊಸೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೆ.ಜಿ. ಕೊಪ್ಪ ಗ್ರಾಮದ ಬಸವರಾಜಪ್ಪನ ಮನೆಯಿಂದ ಉಜ್ಜನಪ್ಪನ ದೇವಸ್ಥಾನದವರೆಗೆ ಎರಡು ಬದಿ ಬಾಕ್ಸ್ ಚರಂಡಿಯ ಕಾಮಗಾರಿಯು 2019 ನೇ ಸಾಲಿನಲ್ಲಿ ಶ್ರೀ. ಹಾಲೇಶಪ್ಪ ರವರಿಗೆ ಮಂಜೂರಾಗಿದ್ದು, ಸದರಿ ಕಾಮಗಾರಿಯನ್ನು ದಿ: 19/06/2019 ರಂದು ಪ್ರಾರಂಭಿಸಿ ದಿ: 27/06/2019 ರಂದು ಮುಕ್ತಾಯ ಮಾಡಿರುತ್ತಾರೆ. ಸದರಿ ಕಾಮಗಾರಿಗೆ ಮಂಜೂರಾಗಿದ್ದ 2.84 ಲಕ್ಷ ರೂ.ಗಳಲ್ಲಿ 74,000/- ರೂ. ಹಣವು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಂತೆ ಕೂಲಿಕಾರ್ಮಿಕರ ಉದ್ಯೋಗ ಕಾರ್ಡ್ ಆಧಾರದ ಮೇಲೆ ಅವರ ಖಾತೆಗೆ ಜಮಾ ಆಗಿರುತ್ತದೆ. ಕಾಮಗಾರಿಗೆ ಉಪಯೋಗಿಸಿದ ಸಾಮಗ್ರಿಗಳಿಗೆ ಮಂಜೂರಾಗಬೇಕಾಗಿದ್ದ ಉಳಿದ 2,10,000/- ರೂ.ಗಳನ್ನು ಶ್ರೀ. ಹಾಲೇಶಪ್ಪರವರ ಖಾತೆಗೆ ಜಮಾ ಮಾಡಲು ಎದುರುದಾರರ ಬಳಿ ಹಲವಾರು ಬಾರಿ ವಿಚಾರ ಮಾಡಿದಾಗ ಎದುರುದಾರರು ಪದೇ ಪದೇ ದೂರುದಾರರನ್ನು ತಿರುಗಾಡಿಸಿರುತ್ತಾರೆ. ದಿ: 09/09/2020 ರಂದು ಪುನ: ಎದುರುದಾರರನ್ನು ವಿಚಾರ ಮಾಡಿದಾಗ ಎದುರುದಾರರು ಕಾಮಗಾರಿಯ ಉಳಿದ ಹಣ ಮಂಜೂರು ಮಾಡಲು 8,000/- ರೂ.ಗಳ ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ. ಆ ಸಂಭಾಷಣೆಯನ್ನು ದೂರುದಾರರು ಅವರ ಮೊಬೈಲ್‌ನಲ್ಲಿ ಧ್ವನಿ ಮುದ್ರಿಸಿಕೊಂಡಿರುತ್ತಾರೆ. ದೂರುದಾರರಿಗೆ ಲಂಚದ ಹಣಕೊಡಲು ಇಷ್ಟವಿಲ್ಲದ್ದರಿಂದ ದೂರುದಾರರು ಎದುರುದಾರರ ವಿರುದ್ಧ ದಿನಾಂಕ 10/09/2020 ರಂದು ಶಿವಮೊಗ್ಗ ಭ್ರಷ್ಟಾಚಾರ ನಿಗ್ರಹದಳದ ಪೊಲೀಸ್ ಉಪಾಧೀಕ್ಷಕರಿಗೆ ದೂರನ್ನು ಸಲ್ಲಿಸಿರುತ್ತಾರೆ. ಸದರಿ ಠಾಣೆಯ ಠಾಣಾಧಿಕಾರಿಗಳು ಅವರ ಠಾಣೆಯ ಗುನ್ನೆ ನಂ.07/2020ರಲ್ಲಿ ಕಲಂ 7(ಎ) ಭ್ರಷ್ಟಾಚಾರ ನಿಗ್ರಹ ಕಾಯ್ದೆ 1988 ರಡಿಯಲ್ಲಿ ಎದುರುದಾರರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುತ್ತಾರೆ.

ಸಂ.ಕಂಪ್ಲೇಂಟ್/ಉಪಲೋಕ್/ಬಿಡಿ/732/2022
ಪಿ.ಓ. ಎ.ಆರ್.ಇ–06

ii) ದಿ: 10/09/2020 ರಂದು ತನಿಖಾಧಿಕಾರಿಗಳು ಜಪ್ತಿ ಪೂರ್ವ ಪಂಚನಾಮೆ ಸಮಯದಲ್ಲಿ ಪಂಚರಾದ 1) ಶ್ರೀ. ಅಭಿನಂದನ್ ಚುಳಕಿ ಬಿನ್ ಸುರೇಶ್ ಬಿ. ಚುಳಕಿ, ಎಸ್.ಡಿ.ಎ. ತಾಲ್ಲೂಕು ಕಛೇರಿ, ಶಿವಮೊಗ್ಗ ಮತ್ತು 2) ಶ್ರೀ. ಸತೀಶ್ ಕೆ. ಬಿನ್ ಲೇಟ್ ಕೆಂಚಪ್ಪ, ಆಹಾರ ನಿರೀಕ್ಷಕರು, ತಾಲ್ಲೂಕು ಕಛೇರಿ, ಶಿವಮೊಗ್ಗ ಇವರನ್ನು ಠಾಣೆಗೆ ಕರೆಯಿಸಿ, ಅವರಿಗೆ ದೂರುದಾರರನ್ನು ಪರಿಚಯಿಸಿ, ದೂರಿನ ಅಂಶಗಳನ್ನು ತಿಳಿಸಿದ ನಂತರ ಪಂಚರಾಗಿ ಸಹಕರಿಸಲು ಒಪ್ಪಿರುತ್ತಾರೆ. ನಂತರ ದೂರುದಾರರು ಲಂಚದ ಹಣಕ್ಕೆ ಬೇಡಿಕೆ ಇಟ್ಟ ಸಂಭಾಷಣೆಯನ್ನು ಧ್ವನಿಮುದ್ರಿಸಿಕೊಂಡಿದ್ದ ಮೊಬೈಲ್‌ನ್ನು ತನಿಖಾಧಿಕಾರಿಯವರ ಮುಂದೆ ಹಾಜರುಪಡಿಸಿರುತ್ತಾರೆ. ಅದರಲ್ಲಿರುವ ಸಂಭಾಷಣೆಯನ್ನು ಎಲ್ಲರಿಗೂ ಕೇಳಿಸಿ, ಆ ಸಂಭಾಷಣೆಯನ್ನು ಪಂಚನಾಮೆಯಲ್ಲಿ ಲಿಪಿಕರಣಗೊಳಿಸಿ, ನಂತರ ಲ್ಯಾಪ್‌ಟಾಪ್ ಮೂಲಕ ಎರಡು ಸಿ.ಡಿ.ಗಳಿಗೆ ವರ್ಗಾಯಿಸಿ, ಆ ಸಿ.ಡಿ.ಗಳನ್ನು ವಶಕ್ಕೆ ಪಡೆದಿರುತ್ತಾರೆ. ತನಿಖಾಧಿಕಾರಿಯವರು ದೂರುದಾರರಿಗೆ ಎದುರುದಾರರು ಕೇಳಿದರೆ ಕೊಡಲೆಂದು ತಂದಿರುವ ಲಂಚದ ಹಣವನ್ನು ಹಾಜರುಪಡಿಸುವಂತೆ ಸೂಚಿಸಿದ ಮೇರೆಗೆ ದೂರುದಾರರು 8,000/– ರೂ. (500/– ರೂ. ಮುಖಬೆಲೆಯ 16 ನೋಟುಗಳನ್ನು) ಹಾಜರುಪಡಿಸಿರುತ್ತಾರೆ. ಸದರಿ ನೋಟುಗಳ ವಿವರಗಳನ್ನು ಪಂಚ ಸಾಕ್ಷಿದಾರರು ಹಾಳೆಯಲ್ಲಿ ಮತ್ತು ಸಿಬ್ಬಂದಿ ಪಂಚನಾಮೆಯಲ್ಲಿ ನಮೂದಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಯವರು ಸಿಬ್ಬಂದಿ ಮುಖಾಂತರ ಸದರಿ ನೋಟುಗಳಿಗೆ ಫಿನಾಫ್ತಲಿನ್ ಪುಡಿಯನ್ನು ಲೇಪಿಸಿದ ನಂತರ, ಪಂಚಸಾಕ್ಷಿ–1 ರವರ ಮುಖಾಂತರ ದೂರುದಾರರ ಪ್ಯಾಂಟಿನ ಬಲ ಮುಂಭಾಗದ ಜೇಬಿನಲ್ಲಿ ಇಡಿಸಿರುತ್ತಾರೆ. ತನಿಖಾಧಿಕಾರಿಯವರು ದೂರುದಾರರಿಗೆ ಎದುರುದಾರರ ಬಳಿ ಹೋಗಿ ಹಾಲೇಶಪ್ಪರವರ ಬಿಲ್ ಮಂಜೂರು ಮಾಡುವ ಬಗ್ಗೆ ಕೇಳಬೇಕು, ಆಗ ಎದುರುದಾರರು ಲಂಚದ ಹಣಕ್ಕೆ ಬೇಡಿಕೆ ಇಟ್ಟರೆ, ಪುಡಿಲೇಪಿತ ನೋಟುಗಳನ್ನು ಅವರಿಗೆ ಕೊಡಬೇಕು, ಆ ನೋಟುಗಳನ್ನು ಎದುರುದಾರರು ಸ್ವೀಕರಿಸಿದರೆ, ನಂತರ ಅಲ್ಲಿಂದ ಹೊರಬಂದು ನಿಮ್ಮ ಮುಖಕ್ಕೆ ಹಾಕಿಕೊಂಡಿದ್ದ ಮಾಸ್ಕ್‌ನ್ನು ತೆಗೆಯುವ ಮೂಲಕ ಸೂಚನೆ ನೀಡಬೇಕೆಂದು ತಿಳಿಸಿರುತ್ತಾರೆ. ತನಿಖಾಧಿಕಾರಿಯವರು ಪಂಚಸಾಕ್ಷಿ–1 ಅಭಿನಂದನ್ ಚುಳಕಿ (ನೆರಳುಸಾಕ್ಷಿ)ರವರಿಗೆ ದೂರುದಾರರ ಮತ್ತು ಎದುರುದಾರರ ನಡುವೆ ನಡೆಯುವ ವಿದ್ಯಮಾನಗಳನ್ನು ಗಮನಿಸುವಂತೆ ತಿಳಿಸಿ, ತನಿಖಾಧಿಕಾರಿಯವರು ದೂರುದಾರರಿಗೆ ಧ್ವನಿ ಮುದ್ರಕವನ್ನು ನೀಡಿ ಎದುರುದಾರರ ಬಳಿ ಹೋಗುವಾಗ ಚಾಲನಾ ಸ್ಥಿತಿಯಲ್ಲಿಟ್ಟುಕೊಳ್ಳುವಂತೆ ತಿಳಿಸಿರುತ್ತಾರೆ. ಇತರೆ

ಎಲ್ಲಾ ಔಚಿತ್ಯಪೂರ್ವ ನಡವಳಿಕೆಗಳನ್ನು ದೂರುದಾರರು, ನೆರಳುಸಾಕ್ಷಿ, ಹಾಗೂ ಪಂಚರ ಸಮಕ್ಷಮ ನಿರ್ವಹಿಸಿರುತ್ತಾರೆ.

iii) ದಿ: 10/09/2020 ರಂದು ದೂರುದಾರರು, ನೆರಳುಸಾಕ್ಷಿ ಮತ್ತು ಪಂಚಸಾಕ್ಷಿ ಹಾಗೂ ಸಿಬ್ಬಂದಿಗಳೊಂದಿಗೆ ತನಿಖಾಧಿಕಾರಿಯವರು ಎದುರುದಾರರ ಕಚೇರಿ ಬಳಿ ಮಧ್ಯಾಹ್ನ ಸುಮಾರು 2.50 ಗಂಟೆಗೆ ಬಂದಿರುತ್ತಾರೆ. ತನಿಖಾಧಿಕಾರಿಯವರು ದೂರುದಾರರಿಗೆ ಮತ್ತು ನೆರಳುಸಾಕ್ಷಿಗೆ ಸೂಚನೆಗಳನ್ನು ಮತ್ತೊಮ್ಮೆ ನೆನಪಿಸಿ ಎದುರುದಾರರ ಬಳಿ ಕಳುಹಿಸಿರುತ್ತಾರೆ. ದೂರುದಾರರು ನೆರಳುಸಾಕ್ಷಿಯೊಂದಿಗೆ ಎದುರುದಾರರ ಕಚೇರಿ ಒಳಗೆ ಹೋದಾಗ ಎದುರುದಾರರು ಕಚೇರಿಯಲ್ಲಿ ಕುಳಿತಿರುತ್ತಾರೆ. ಆಗ ದೂರುದಾರರು ಕಾಮಗಾರಿಯ ಹಣ ಬಿಡುಗಡೆಗೆ ಟ್ಯಾಕ್ಸ್ ಕಟ್ಟುವ ಬಗ್ಗೆ, ಅವರ ನಡುವೆ ಮಾತುಕತೆಯಾಗಿದ್ದು, ನಂತರ ಎದುರುದಾರರು ಎಫ್.ಟಿ.ಓ. ಲಾಕ್ ಆಗಿದೆ ಎಂದು ಕೆಲಸ ಮಾಡದೆ ನಿನ್ನೆ ಕೇಳಿದ್ದ ಲಂಚದ ಹಣವನ್ನು ಕೊಡುವಂತೆ ಕೈಸನ್ನೆಯಿಂದ ಬೇಡಿಕೆ ಇಟ್ಟಿರುತ್ತಾರೆ. ಆಗ ದೂರುದಾರರು ಪುಡಿಲೇಪಿತ ನೋಟುಗಳನ್ನು ಎದುರುದಾರರ ಟೇಬಲ್ ಮೇಲೆ ಇಟ್ಟು ಎಣಿಸಿಕೊಳ್ಳಿ ಯಾರಾದರೂ ಬರುತ್ತಾರೆ ಎಂದು ಹೇಳಿದಕ್ಕೆ, ಆಯ್ತು ಹೋಗು, ನನ್ನ ಟೇಬಲ್ ಮೇಲೆ ನನ್ನ ಬ್ಯಾಗ್ ಹತ್ತಿರವೇ ಇದೆ ಯಾರು ಮುಟ್ಟುವುದಿಲ್ಲವೆಂದು ತಿಳಿಸಿರುತ್ತಾರೆ. ಆಗ ದೂರುದಾರರು ಕಚೇರಿಯಿಂದ ಹೊರಹೋಗಿ ಮಾಸ್ಕ್ ತೆಗೆಯುವ ಮೂಲಕ ತನಿಖಾಧಿಕಾರಿಯವರಿಗೆ ಮಧ್ಯಾಹ್ನ ಸುಮಾರು 3.20 ಗಂಟೆಗೆ ಸೂಚನೆ ನೀಡಿದಾಗ ತನಿಖಾಧಿಕಾರಿಯವರ ತಂಡ ದೂರುದಾರರ ಬಳಿ ಬಂದಿದ್ದು, ದೂರುದಾರರು ಎದುರುದಾರರ ಕಚೇರಿಯ ಒಳಗಡೆ ತನಿಖಾಧಿಕಾರಿಯವರನ್ನು ಕರೆದುಕೊಂಡು ಬಂದು ಎದುರುದಾರರನ್ನು ತೋರಿಸಿದ್ದು, ಆಗ ತನಿಖಾಧಿಕಾರಿಯವರು ಎದುರುದಾರರಿಗೆ ಗುರುತಿನ ಚೀಟಿಯನ್ನು ತೋರಿಸಿ ತನಿಖೆಗೆ ಸಹಕರಿಸುವಂತೆ ತಿಳಿಸಿರುತ್ತಾರೆ.

ತನಿಖಾಧಿಕಾರಿಯವರು ಸಿಬ್ಬಂದಿ ಮುಖಾಂತರ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಿ, ಮೂರು ಬಟ್ಟಲುಗಳಲ್ಲಿ ತೆಗೆದುಕೊಂಡು, ಒಂದು ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಎದುರುದಾರರ ಬಲಗೈ ಬೆರಳುಗಳನ್ನು ಅದ್ದಿಸಿ ತೊಳೆಸಿದಾಗ ಆ ದ್ರಾವಣವು ತಿಳಿಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ಇನ್ನೊಂದು ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಎದುರುದಾರರ ಎಡಗೈ ಬೆರಳುಗಳನ್ನು ಅದ್ದಿಸಿ ತೊಳೆಸಿದಾಗ, ಆ ದ್ರಾವಣವು ಯಾವುದೇ ಬಣ್ಣಕ್ಕೆ ತಿರುಗಿರುವುದಿಲ್ಲ. ಆ

ದ್ರಾವಣಗಳನ್ನು ಪ್ರತ್ಯೇಕವಾಗಿ ತನಿಖಾಧಿಕಾರಿಯವರು ವಶಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯವರು ದೂರುದಾರರಿಂದ ಪಡೆದ ಹಣವನ್ನು ಹಾಜರುಪಡಿಸುವಂತೆ ತಿಳಿಸಿದಾಗ ಎದುರುದಾರರು ಹಣ ಪಡೆದುಕೊಂಡಿರುವುದಿಲ್ಲವೆಂದು ದೂರುದಾರರೇ ಒತ್ತಾಯಪೂರ್ವಕವಾಗಿ ಟೇಬಲ್ ಮೇಲೆ ಇಟ್ಟಿರುತ್ತಾರೆಂದು ತೋರಿಸಿರುತ್ತಾರೆ. ನಂತರ, ತನಿಖಾಧಿಕಾರಿಯವರ ಸೂಚನೆ ಮೇರೆಗೆ ಪಂಚಸಾಕ್ಷಿ-1 ರವರು ಆ ನೋಟುಗಳ ವಿವರಗಳನ್ನು ಪ್ರಾಯೋಗಿಕ ಪಂಚನಾಮೆ ಸಮಯದಲ್ಲಿ ಹಾಳೆಯಲ್ಲಿ ಮತ್ತು ಪಂಚನಾಮೆಯಲ್ಲಿ ನಮೂದಿಸಿದ ನೋಟುಗಳ ವಿವರಗಳಿಗೆ ತಾಳೆಮಾಡಿ ನೋಡಲಾಗಿ ಆ ನೋಟುಗಳ ವಿವರಗಳು ತಾಳೆಯಾದ್ದರಿಂದ, ಆ ನೋಟುಗಳನ್ನು ತನಿಖಾಧಿಕಾರಿಯವರು ವಶಕ್ಕೆ ಪಡೆದಿರುತ್ತಾರೆ. ತನಿಖಾಧಿಕಾರಿಯವರ ಸೂಚನೆ ಮೇರೆಗೆ ಸಿಬ್ಬಂದಿ ಪುಡಿಲೇಪಿತ ನೋಟುಗಳನ್ನು ಇಟ್ಟಿದ್ದ ಟೇಬಲ್‌ನ ಮೇಲ್ಭಾಗವನ್ನು ಹತ್ತಿಯಿಂದ ಒರೆಸಿ, ಒರೆಸಿದ ಹತ್ತಿಯನ್ನು ಮತ್ತೊಂದು ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ಅದ್ದಿಸಿದಾಗ, ಆ ದ್ರಾವಣವು ತಿಳಿಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ತನಿಖಾಧಿಕಾರಿಯವರು ಆ ದ್ರಾವಣವನ್ನು ಮತ್ತು ಹತ್ತಿಯನ್ನು ಪ್ರತ್ಯೇಕವಾಗಿ ವಶಕ್ಕೆ ಪಡೆದಿರುತ್ತಾರೆ.

ತನಿಖಾಧಿಕಾರಿಯವರು ಎದುರುದಾರರ ಮೇಲಾಧಿಕಾರಿಯಾದ ಶ್ರೀ. ಪರಮೇಶ್, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಶಿಕಾರಿಪುರರವರನ್ನು ಎದುರುದಾರರ ಕಚೇರಿಗೆ ಬರಮಾಡಿಕೊಂಡು ಎದುರುದಾರರ ಕಚೇರಿಯಲ್ಲಿ ಪಂಚನಾಮೆ ಜರುಗಿಸಲು ಅನಾನುಕೂಲವಾದ್ದರಿಂದ, ಶಿಕಾರಿಪುರ ನಗರದಲ್ಲಿರುವ ತಾಲ್ಲೂಕು ಪಂಚಾಯಿತಿ ಕಾರ್ಯಾಲಯಕ್ಕೆ ತನಿಖಾಧಿಕಾರಿಯವರು ಎಲ್ಲರನ್ನು ಕರೆದುಕೊಂಡು ಹೋಗಿರುತ್ತಾರೆ. ಈ ಪ್ರಕರಣಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ಎದುರುದಾರರ ಮೇಲಾಧಿಕಾರಿಯವರು ಹಾಜರುಪಡಿಸಿದ್ದು, ಆ ದಾಖಲೆಗಳ ಜೆರಾಕ್ಸ್ ಪ್ರತಿಗಳನ್ನು ಪಡೆದು, ಆ ದಾಖಲೆಗಳನ್ನು ಮೇಲಾಧಿಕಾರಿಯವರಿಂದ ದೃಢೀಕರಿಸಿ ತನಿಖಾಧಿಕಾರಿಯವರು ವಶಕ್ಕೆ ಪಡೆದಿರುತ್ತಾರೆ.

ತನಿಖಾಧಿಕಾರಿಯವರು ಪ್ರಾಯೋಗಿಕ ಪಂಚನಾಮೆಯಲ್ಲಿ ವಶಕ್ಕೆ ಪಡೆದ ಸಿ.ಡಿ.ಯನ್ನು ಎದುರುದಾರರ ಮೇಲಾಧಿಕಾರಿಯಾದ ಶ್ರೀ. ಪರಮೇಶ್‌ರವರಿಗೆ ಕೇಳಿಸಿದಾಗ, ಅವರು ಎದುರುದಾರರ ಧ್ವನಿಯನ್ನು ಗುರುತಿಸಿರುತ್ತಾರೆ. ತನಿಖಾಧಿಕಾರಿಯವರು ಎದುರುದಾರರ ಬಳಿ ಹೋಗುವಾಗ ಧ್ವನಿ ಮುದ್ರಕವನ್ನು ಚಾಲನಾ ಸ್ಥಿತಿಯಲ್ಲಿಟ್ಟುಕೊಳ್ಳುವಂತೆ ನೀಡಿದ ಧ್ವನಿ ಮುದ್ರಕವನ್ನು ದೂರುದಾರರಿಂದ

ಪಡೆದು, ಆ ಧ್ವನಿ ಮುದ್ರಕದಲ್ಲಿದ್ದ ಸಂಭಾಷಣೆಯನ್ನು ಎಲ್ಲರಿಗೂ ಕೇಳಿಸಿದಾಗ, ಆ ಧ್ವನಿ ಮುದ್ರಕದಲ್ಲಿದ್ದ ಎದುರುದಾರರ ಧ್ವನಿಯನ್ನು ಮೇಲಾಧಿಕಾರಿಯವರು ಗುರುತಿಸಿರುತ್ತಾರೆ ಹಾಗೂ ಅದರಲ್ಲಿರುವ ಸಂಭಾಷಣೆಯನ್ನು ಪಂಚನಾಮೆಯಲ್ಲಿ ಲಿಪಿಕರಣಗೊಳಿಸಿ, ನಂತರ ಆ ಸಂಭಾಷಣೆಯನ್ನು ಕಂಪ್ಯೂಟರ್ ಮೂಲಕ ಎರಡು ಸಿ.ಡಿ.ಗಳಿಗೆ ವರ್ಗಾಯಿಸಿ ಆ ಸಿ.ಡಿ.ಗಳನ್ನು ವಶಕ್ಕೆ ಪಡೆದಿರುತ್ತಾರೆ.

ತನಿಖಾಧಿಕಾರಿಯವರು ಎದುರುದಾರರಿಗೆ ಸಮಜಾಯಿಷಿ ಬರೆದುಕೊಡುವಂತೆ ತಿಳಿಸಿದಾಗ ಅವರು ಅವರ ಸಮಜಾಯಿಷಿಯಲ್ಲಿ "ಹೊಸೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೆ.ಜಿ. ಕೊಪ್ಪ ಗ್ರಾಮದ ಬಸವರಾಜಪ್ಪನ ಮನೆಯಿಂದ ಉಜ್ಜಪ್ಪನ ದೇವಸ್ಥಾನದವರೆಗೆ ಚರಂಡಿ ಕಾಮಗಾರಿಯು 2017 ರಲ್ಲಿ ಪ್ರಾರಂಭವಾಗಿ 2018-19ನೇ ಸಾಲಿನಲ್ಲಿ ಮುಕ್ತಾಯವಾಗಿರುತ್ತದೆ. ನಾನು ಹೊಸೂರು ಗ್ರಾಮ ಪಂಚಾಯಿತಿಗೆ ದಿ: 28/10/2019 ರಂದು ವಿಶಿಷ್ಟ ಚಾರ್ಜನ್ನು ತೆಗೆದುಕೊಂಡಿರುತ್ತೇನೆ. ಚಾರ್ಜ್ ತೆಗೆದುಕೊಂಡ ಸಮಯದಲ್ಲಿ ಚಾರ್ಜ್ ಪಟ್ಟಿಯಲ್ಲಿ ಕಾಮಗಾರಿಯ ಹೆಸರು ನಮೂದಾಗಿರುವುದಿಲ್ಲ ಮತ್ತು ಕಾಮಗಾರಿಯ ಫೈಲ್ ನಮ್ಮ ಕಚೇರಿಗೆ ದಿ: 09/09/2020 ರಂದು ತಲುಪಿರುತ್ತದೆ. ಆದರೆ ದೂರುದಾರರು ಮೂಲ ಕಾಮಗಾರಿಯ ಗುತ್ತಿಗೆದಾರರಲ್ಲ, ಅವರಿಗೂ ಮತ್ತು ಬಿಲ್‌ಗೂ ಯಾವುದೇ ಸಂಬಂಧವಿರುವುದಿಲ್ಲ. ಆದರೂ ದಿ: 10/09/2020 ರಂದು ದೂರುದಾರರು ನನ್ನ ಟೇಬಲ್‌ನ ಬಳಿ ಬಂದು ಲಂಚದ ಹಣವನ್ನು ನೀಡಲು ಮುಂದಾಗಿದ್ದು, ಹಣವನ್ನು ಸ್ವೀಕರಿಸದೆ ಇದ್ದಾಗ, ಚೇರ್‌ನ ಮೇಲಿಂದ ನನ್ನನ್ನು ತಳ್ಳಿ ಹಣವನ್ನು ನೀಡಲು ಮುಂದಾಗಿರುತ್ತಾರೆ. ಯಾವಾಗ ನಾನು ಹಣವನ್ನು ಕೈಯಲ್ಲಿ ಪಡೆಯದೆ ಇದ್ದಾಗ, ಹಣವನ್ನು ಟೇಬಲ್ ಮೇಲೆ ಇಟ್ಟು ಹೋಗಿರುತ್ತಾರೆಂದು" ತಿಳಿಸಿರುತ್ತಾರೆ. ಸದರಿ ಸಮಜಾಯಿಷಿಯನ್ನು ದೂರುದಾರರು ಮತ್ತು ನೆರಳುಸಾಕ್ಷಿ ಅಲ್ಲಗಳೆದಿರುತ್ತಾರೆ. ದೂರುದಾರರು ಮತ್ತು ನೆರಳುಸಾಕ್ಷಿ ಎದುರುದಾರರು ಬರೆದುಕೊಟ್ಟ ಸಮಜಾಯಿಷಿಯು ಸುಳ್ಳೆಂದು ಮತ್ತು ಎದುರುದಾರರೇ ದೂರುದಾರರಿಂದ ಲಂಚದ ಹಣವನ್ನು ಕೇಳಿ ಪಡೆದುಕೊಂಡಿರುತ್ತಾರೆಂದು ಬರೆದು ಸಹಿ ಮಾಡಿರುತ್ತಾರೆ.

ತನಿಖಾಧಿಕಾರಿಯವರು ಎದುರುದಾರರ ಮಾದರಿ ಧ್ವನಿಯನ್ನು ಪಡೆದು ಆ ಧ್ವನಿಯನ್ನು ಲ್ಯಾಪ್‌ಟಾಪ್ ಮೂಲಕ ಎರಡೆರಡು (ನಾಲ್ಕು) ಸಿ.ಡಿ.ಗಳಿಗೆ ವರ್ಗಾಯಿಸಿ, ಆ ಸಿ.ಡಿ.ಗಳನ್ನು ವಶಕ್ಕೆ ಪಡೆದು, ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ. ನಂತರ ತನಿಖಾಧಿಕಾರಿಯವರು ಸವಿಸ್ತಾರ ಜಪ್ತಿ ಪಂಚನಾಮೆಯನ್ನು ನಿರ್ವಹಿಸಿರುತ್ತಾರೆ. ಎದುರುದಾರರು ನೀಡಿದ

ಸಂ.ಕಂಪ್ಲೇಂಟ್/ಉಪಲೋಕ್/ಬಿಡಿ/732/2022
ಪಿ.ಓ. ಎ.ಆರ್.ಇ–06

ಸಮಜಾಯಿಷಿಯು ಸಮರ್ಪಕವಾಗಿರುವುದಿಲ್ಲ. ಕಾರಣ ಎದುರುದಾರರಿಂದ ವಶಪಡಿಸಿಕೊಂಡ ಮುದ್ದೆಮಾಲುಗಳಲ್ಲಿ ಫಿನಾಫ್ತಲಿನ್ ಅಂಶವಿರುವುದು ಕಂಡುಬಂದಿರುತ್ತದೆ.

iv) ತನಿಖಾಧಿಕಾರಿಯವರು ಸಾಕ್ಷಿದಾರರ ಹೇಳಿಕೆ ಮತ್ತು ದಾಖಲೆಗಳನ್ನು ಕಲೆ ಹಾಕಿ, ರಾಸಾಯನಿಕ ತಜ್ಞರ ಪರೀಕ್ಷಾ ವರದಿಯನ್ನು ಮತ್ತು ಅಭಿಯೋಜನಾ ಮಂಜೂರಾತಿಯನ್ನು ಪಡೆದು ಎದುರುದಾರರ ವಿರುದ್ಧ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತಾರೆ.

v) ದೂರು ಅರ್ಜಿ, ಸಾಕ್ಷಿದಾರರ ಹೇಳಿಕೆಗಳು ಹಾಗೂ ತನಿಖಾಧಿಕಾರಿಯವರು ಸಂಗ್ರಹಿಸಿದ ದಾಖಲೆ, ರಾಸಾಯನಿಕ ವರದಿ ಮತ್ತು ಇತರ ಅಂಶಗಳು, ಎದುರುದಾರರ ಸತತವಾದ ದುರ್ನಡತೆಯನ್ನು ತೋರಿಸುತ್ತದೆ.

3. ಎದುರುದಾರರಿಗೆ ಪರಿವೀಕ್ಷಣಾ ಟಿಪ್ಪಣಿಯನ್ನು ಕಳುಹಿಸಿದ್ದು, ದಿ: 27/07/2022 ರಂದು ಜಾರಿಯಾಗಿರುತ್ತದೆ. ಎದುರುದಾರರಿಗೆ ಸುಮಾರು ಎರಡು ತಿಂಗಳ ಕಾಲಾವಕಾಶ ನೀಡಿದ್ದರೂ ಸಹ ಎದುರುದಾರರು ಯಾವುದೇ ಆಕ್ಷೇಪಣೆಗಳನ್ನು ಪರಿವೀಕ್ಷಣಾ ಟಿಪ್ಪಣಿಗೆ ಸಲ್ಲಿಸಿರುವುದಿಲ್ಲ. ಎದುರುದಾರರು ಜಪ್ತಿ ಪಂಚನಾಮೆ ಸಮಯದಲ್ಲಿ ನೀಡಿದ ಸಮಜಾಯಿಷಿಯನ್ನು ದೂರುದಾರರು ಮತ್ತು ನೆರಳು ಸಾಕ್ಷಿ ಅಲ್ಲಗೆಳೆದಿರುವುದರಿಂದ ಅವರ ಸಮಜಾಯಿಷಿಯು ತೃಪ್ತಿದಾಯಕವಾಗಿರುವುದಿಲ್ಲ. ಎದುರುದಾರರಿಂದ ತನಿಖಾಧಿಕಾರಿಯವರು ಸಂಗ್ರಹಿಸಿದ ಮುದ್ದೆಮಾಲುಗಳಲ್ಲಿ ಫಿನಾಫ್ತಲಿನ್ ಅಂಶ ಇರುವುದು ಕಂಡುಬಂದಿರುತ್ತದೆ. ಈ ಎಲ್ಲಾ ಕಾರಣಗಳಿಂದ ಮತ್ತು ಸಮಜಾಯಿಷಿಯ ಅಂಶಗಳು ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳಾಗಿ ಕಂಡುಬರುವುದಿಲ್ಲ.

4. ದೂರು ಅರ್ಜಿ, ಸಾಕ್ಷಿದಾರರ ಹೇಳಿಕೆಗಳು, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆಗಳು, ರಾಸಾಯನಿಕ ತಜ್ಞರ ಪರೀಕ್ಷಾವರದಿ ಹಾಗೂ ದೋಷಾರೋಪಣ ಪತ್ರದಲ್ಲಿರುವ ಮಾಹಿತಿಗಳಿಂದ ಎದುರುದಾರರು ನೀಡಿರುವ ಉತ್ತರಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಎದುರುದಾರರ ವಿರುದ್ಧ ನಡೆವಳಿಯನ್ನು ಕೈಬಿಡಲು ಸೂಕ್ತ / ಸಮಂಜಸ / ಸಮಾಧಾನಕರ ಕಾರಣ ತೋರಿಸಿಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

ಸಂ.ಕಂಪ್ಲೇಂಟ್/ಉಪಲೋಕ್/ಬಿಡಿ/732/2022
ಪಿ.ಓ. ಎ.ಆರ್.ಇ–06

5. ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 2 (12) ರ ಪ್ರಕಾರ ಎದುರುದಾರರು ಸರ್ಕಾರಿ / ಸಾರ್ವಜನಿಕ ನೌಕರರಾಗಿದ್ದು, ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯದಲ್ಲಿ ನಿಷ್ಠೆ ತೋರಿಸದೆ ಭ್ರಷ್ಟಾಚಾರವೆಸಗಿ ಕ.ನಾ.ಸೇ. (ನಡತೆ) ನಿಯಮಗಳು 1966 ನಿಯಮ 3 (1)(i) ರಿಂದ (iii) (ಪ್ರಸ್ತುತ ಕ.ನಾ.ಸೇ. (ನಡತೆ) ನಿಯಮಗಳು 2021 ನಿಯಮ (i) ರಿಂದ (iv)) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

6. ಈ ಮೇಲ್ಕಂಡ ಅಂಶಗಳಿಗಾಗಿ ಎದುರುದಾರರಾದ ಶ್ರೀ. ಹೆಚ್. ಶಿವಪ್ಪ ಬಿನ್ ಹನುಮಂತಪ್ಪರವರ (ನಿವೃತ್ತಿ ದಿನಾಂಕ: 31/05/2038) ವಿರುದ್ಧ ಇಲಾಖಾ ವಿಚಾರಣಾ ಮಾಡಲು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ನಿಯಮ 14(ಎ)ರಡಿ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ 12(3)ರಡಿ ಪ್ರದತ್ತವಾದ ಅಧಿಕಾರದಡಿ, ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

7. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ, ಈ ವರದಿಯನ್ನು ಸ್ವೀಕರಿಸಿದ <u>ಮೂರು ತಿಂಗಳೊಳಗೆ</u> ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

8/11/22

(ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ)
ಉಪಲೋಕಾಯುಕ್ತರು–2,
ಕರ್ನಾಟಕ ರಾಜ್ಯ, ಬೆಂಗಳೂರು.